doc-140
T.P-2

SATYAVADI Founded 1917 Regd. No. M. 1299

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 126 | ಶನಿವಾರ 12—1—46 | ಬಿಡಿ ಪ್ರತಿ 3 ಪೈ

ರಷ್ಯಾದಲ್ಲಿ ಭಂಗಾರದ ರಾಶಿ

ಲಂಡನ್ ಜ 10— ರಷ್ಯಾದ ಒಹು ಗುಟ್ಟಾಗಿ ಇಡಲ್ಪಟ್ಟಿರುವ ಒಂದು ವರ್ತಮಾನವನ್ನು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯಿಂದ ಹೊರಪಟ್ಟಿದೆ. ರಹಸ್ಯದಲ್ಲಿ 500 ರಿಂದ 2000 ಮಿಲಿಯ ಪೌಂಡು ಭಂಗಾರವು ಕೇವಣೆ ಇಡಲಾಗಿದೆಯೆಂದೂ, ಜೊತೆಗೆ 19 ಗಣಿಗಳಿಂದ ವರ್ಷಕ್ಕೆ 42 ರಿಂದ 70 ಮಿಲಿಯ ಪೌಂಡು ಭಂಗಾರವನ್ನು ವರ್ಷಕ್ಕೆ ತಯಾರಿಸುತ್ತಿರುವರೆಂದೂ ಹೇಳಲಾಗಿದೆ.

ಕಡೂರು ಜಿಲ್ಲೆಯಲ್ಲಿರುವ ಹೋಟಲಿನವರು ದಿನಕ್ಕೆ ಒಂದು ಸಿಹಿ ಪದಾರ್ಥ ಮಾತ್ರ ತಯಾರ್ಮಾಡಿ ಮಿಕ್ಕ ಸಕ್ಕರೆಯನ್ನು ಒಳ್ಳೇ ಕಾಫಿ ತಯಾರಿಸಲು ಉಪಯೋಗಿಸಬೇಕೆಂದು ಕಡೂರು ಡಿ || ಮ್ಯಾಜಿಸ್ಟ್ರೇಟರು ಒಂದು ಹುಕುಂ ಹೊರಡಿಸಿರುವುದಾಗಿ ತಿಳಿಯಬಂದಿದೆ.

ಬ್ರಿಟಿಷ್ ಪಾರ್ಲಿಮೆಂಟರಿ ರಾಯಭಾರಿಯವರು ಈ ತಿಂಗಳು ಕಡೆಯಲ್ಲಿ ಮಹಾತ್ಮಾ ಗಾಂಧಿಯವರನ್ನೂ, ಸಿ. ರಾಜಗೋಪಾಲಾಚಾರಿಯವರನ್ನೂ ಭೇಟಿ ಮಾಡುವರೆಂದು ಪ್ರಕಟವಾಗಿದೆ.

ಬೊಂಬಾಯಿನಲ್ಲಿ ಕಾಂಗ್ರೆಸ್ ಅಧಿವೇಶನಕ್ಕೆ ನಿವೇಶನವನ್ನು ಆರಿಸಲಾಗಿದೆಯೆಂದೂ ಮುಂದಿನ ಏರ್ಪಾಡುಗಳನ್ನು ಕೈಗೊಳ್ಳಲು ಅಧ್ಯಕ್ಷರ ಅನುಜ್ಞೆಯು ನಿರೀಕ್ಷಿಸಲಾಗುತ್ತಿದೆಯೆಂದೂ ವರದಿಯಾಗಿದೆ.

ಮಾಸ್ಕೋ ಒಪ್ಪಂದದಲ್ಲಿ ಅಣುಶಕ್ತಿ ವಿನಿಯೋಗದ ಬಗ್ಗೆ ಇರುವ ಬರವಣಿಗೆಯ ವಿವರಣೆ ವಿಷಯದಲ್ಲಿ ತೀವ್ರ ಭೇದ ಉಂಟಾಗಿದ್ದು, ಈ ಒಗ್ಗೆ ಮಾಲ್ಟಾವೊವರು ಲಂಡನ್ನಿಗೆ ಹೋಗಬಹುದೆಂದು ಹೇಳಲಾಗಿದೆ.

ಡೆಲ್ಲೀ ಕೆಂಪು ಕೋಟೆಗೆ 300 ಮಂದಿ ಐ. ಎನ್. ಎ ಸ್ತ್ರೀಯರನ್ನು ತಂದಲಾಗಿದೆ.

ಪ್ರಪಂಚದ ಯಹೂದಿ ಕಾಂಗ್ರೆಸ್ಸಿನ ಅಧ್ಯಕ್ಷರು ತಾ || 10 ರಲ್ಲಿ ಮ್ಯೂನಿಕ್ಕಿಗೆ ಹೋಗಿ ಅಮೇರಿಕನ್ ಕಮ್ಯಾಂಡರಿನ ಅತಿಥಿಯಾಗಿರುವರು.

ಮೈಸೂರು ಸಂಸ್ಥಾನದಲ್ಲಿ ಹಿಂದೀ ಪ್ರಚಾರಕ್ಕಾಗಿ ನಿಧಿ ಸಂಗ್ರಹಿಸುವ ಸಲುವಾಗಿ ಪ್ರಮುಖ ಸ್ತ್ರೀ ಪುರುಷರು ಕೆಲವರು ಒಂದು ವಿನಂತಿ ಹೊರಡಿಸಿದ್ದಾರೆ.

ತಾ || 10 ರಲ್ಲಿ ಬ್ರಿಟಿಷ್ ಪಾರ್ಲಿಮೆಂಟರಿ ರಾಯಭಾರಿಯವರು ಪಂ || ನೆಹರೂರನ್ನು ಭೇಟಿ ಮಾಡಿ, 2 ಗಂಟೆಗಳ ಕಾಲ ವಿವಿಧ ವಿಚಾರದಲ್ಲಿ ಚರ್ಚೆ ನಡೆಸಿದರು. ಮಿಸೆಸ್ ನಿಕೋಲರು ಪಂಡಿತಜೀಯನ್ನು ಪ್ರಶಂಸಿಸಿ, ತಾವು ಒಬ್ಬ ಮಹಾಪುರುಷನನ್ನೇ ಕಂಡೆನೆಂದರು.

ಸೂಚನೆ— ಉತ್ಕ್ರಾಯಣ ಪುಣ್ಯಕಾಲದ ಪ್ರಯುಕ್ತ ನೋಮುಪಾರದ ದಿವಸ ಪತ್ರಿಕೆಯು ಪ್ರಕಟಿಸಲ್ಪಡುವುದಿಲ್ಲ. — ಸಂ

ಕಾಂಗ್ರೆಸ್ ಬಿಟ್ಟರು

ಹಿಸ್ಸಾರಿನ ಬನ್ಸಿಲಾಲ್ ಆಜಾದ್ ಎಂಬ ಕಾಂಗ್ರೆಸ್ ಮುಖಂಡರು ರೆಡಿಕಲ್ ಪಕ್ಷಕ್ಕೆ ಸೇರಿದರು. (ಬಿ)

ಉಚಿತ ಚಿಕಿತ್ಸೆ

ಮೈಸೂರು ನಗರದಲ್ಲಿ ಮಕ್ಕಳಿಗಾಗಲೀ ಅಥವಾ ದೊಡ್ಡವರಿಗಾಗಲೀ 'ದಿ ಸ್ಟೀರಿಯಾ' ಅಂದರೆ ಗಂಟಲು ಮುಚ್ಚಿಕೊಂಡು ಬರುವ ರೋಗಕ್ಕೆ ಮೈಸೂರು ಪೌರಸಭೆ ಆರೋಗ್ಯ ಇಲಾಖೆಯಲ್ಲಿ ಸೀರಂ (ಇಂಜಕ್ಷನ್ ಟ್ಯೂಬು) ಗಳು ಡಾಕ್ಟರುಗಳ ಮೂಲಕ ಮೈಸೂರು ಪೌರಸಭಾಧ್ಯಕ್ಷರಿಗಾಗಲೀ ಅಥವಾ ಆರೋಗ್ಯಾಧಿಕಾರಿಗಳಿಗಾಗಲೀ ಶಿಫಾರಸ್ಸು ತಂದಲ್ಲಿ ಬಡವರಿಗೆ ಉಚಿತವಾಗಿ ಕೊಡಲಾಗುತ್ತದೆಯೆಂದು ಪೌರಸಭಾ ಸದಸ್ಯರಾದ ಶ್ರೀ ಎಂ ಆರ್. ಸಿ. ಬಸಪ್ಪನವರು ತಿಳಿಸುತ್ತಾರೆ.

ಗಾಂಧೀಜೀ ಭೇಟಿಯಿಲ್ಲ

ಗೋಹತಿ, ಜ 10 — ಗಾಂಧೀಜಿಯವರು ಒರಿಸ್ಸಾ ಮತ್ತು ಆಂಧ್ರ ಪ್ರಾಂತ್ಯಕ್ಕೆ ಭೇಟಿ ಕೊಡಲು ಸಾಧ್ಯವಿಲ್ಲವೆಂದು ತಿಳಿಸಿರುವರು.

ಪ್ರತಿಬಂಧಕ ವಜಾ

ಕ್ವಿಲಾನ್, ಜ 9 — ಪ್ರಸಿದ್ಧ ಅಡ್ವೊಕೇಟರೂ ಮತ್ತು ಶಾಸನ ಸಭಾ ಕಾಂಗ್ರೆಸ್ ಸದಸ್ಯರು ಆದ ಶ್ರೀ ಉದಯಭಾನು ಮತ್ತು ತಾಂಪಿಯವರ ಮೇಲಿದ್ದ ನಿರ್ಬಂಧಾಜ್ಞೆಯನ್ನು ಜಿಲ್ಲಾಧಿಕಾರಿಗಳು ವಜಾ ಮಾಡಿರುವರು.

ಮರಣ

ಸೂರತ್, ಜ 9 — ನಿನ್ನೆಯ ದಿವಸ ಇಲ್ಲಿ ಸಿಡಿಬಿನಿಂದ 19 ಮಂದಿ ನಿಧನರಾಗಿರುವರು

ಸರ್ ಅಲಗಪ್ಪ ಚೆಟ್ಟಿಯಾರ್

ಎರ್ನಾಕುಲಂ, ಜ 9 — ಸರ್ ಅಲಗಪ್ಪ ಚೆಟ್ಟಿಯಾರಿಗೆ ಬಿನ್ನವತ್ತಳೆಯನ್ನು ಅರ್ಪಿಸಲು ಪೌರಸಭೆಯವರು ನಿರ್ಣಯಿಸಿರುವರು.

ತ್ರಿಚೂರಿನಲ್ಲಿ ಇಂಡಿಯನ್ ಬ್ಯಾಂಕಿನ ಕೆಲಸಗಾರರು ಸರ್ ಅಲಗಪ್ಪ ಚೆಟ್ಟಿಯಾರರನ್ನು ಸತ್ಕರಿಸಿ ಅವರ ಉದಾರವಾದ ಧರ್ಮಗಳನ್ನು ವಾಣಿಜ್ಯ ಕೈಗಾರಿಕಾಭಿವೃದ್ಧಿ ಬಗ್ಗೆ ಅನುಗಿರುವ ಬುದ್ಧಿ ಕುಶಲತೆಯನ್ನು ಪ್ರಶಂಸಿಸಿದರು. ಕೊಯಮುತ್ತೂರಿನ ಜೂಪಿಟರ್ ಇನ್ಸೂರನ್ಸ್ ಕಂಪೆನಿಯ ಏಜೆಂಟರು ಸತ್ಕರಿಸಿ ಪ್ರಶಂಸಿಸಿದರು. ಅಲಗಪ್ಪ ನಗರದಲ್ಲಿರುವ ಕೊಚ್ಚಿ ಟೆಕ್ಸ್‌ಟೈಲ್ಸಿನವರೂ ಸತ್ಕರಿಸಿ ಅವರನ್ನು ಕೊಂಡಾಡಿದರು.

ಆಕಸ್ಮಿಕ ಮರಣ

ಬೊಂಬಾಯಿನಲ್ಲಿ ಒಬ್ಬ ಆಕ್ಸ್‌ಫರ್ಡ್ ಪದವೀಧರನು 'ನಿದ್ರಾ' ಭಂಗ ನಿರೋಧದ ಔಷಧದ ಸೇವನೆಯಲ್ಲಿ ಸ್ವಲ್ಪ ಪ್ರಮಾಣ ಹೆಚ್ಚಾದ್ದರಿಂದ ಗತಪ್ರಾಣನಾದನೆಂದು ತಿಳಿಯಬಂದಿದೆ.

ಭಾರಿ ಕಳ್ಳತನ

ಬೊಂಬಾಯಿನ ಆರ್. ಎ. ಎಫ್. ಡಿಪೋವೊಂದರಲ್ಲಿ ರೂ. 20000 ಬೆಲೆಯ ಸಾಮಾನು ಕಳುವಾಗಿ ಒಬ್ಬನ ದಸ್ತಗಿರಿಯಾಗಿದೆ.

ವಿಮಾನ ಧಾಳಿ ನಿಧಿ

ಲಂಡನ್ನಿನ ವಿಮಾನ ಧಾಳಿ ರಕ್ಷಣಾ ನಿಧಿಗೆ ವೈಸ್ರಾಯರ ಯುದ್ಧ ಕಾರ್ಯ ನಿಧಿಯಿಂದ ಭಾರತದ ರೂ. 20 ಲಕ್ಷವನ್ನು ಕೊಡಲಾಗಿದೆಯೆಂದು ಡೆಲ್ಲಿ ವಾರ್ತೆ.

ನಾಜೀ ಕಮ್ಯಾಂಡರ್‌ಗಳು — ಗೊರಿಂಗ್ ಜೊತೆ ರಿಬ್ಬನ್‌ಟ್ರಾಪ್.

ಉಡುಪುಗಳನ್ನು ಅತಿ ಬೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಅಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;

ಈ ಸಾಬೂನನ್ನು ಇನಿತ್ತು ಉಪಯೋಗಿಸಿ ನೋಡಿ;

ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.



ಮೈಸೂರು

ಸಾಬೂನು

ಕೊಳಕು ಬಟ್ಟೆಗಳನ್ನು

ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

At Ranjit

From 11-1-46

Vish Kanya

ಸಾಧನ ಪೋಸ್, ಟ್ರಿಥ್ರಿಕಾಲ್

ಸುವೇದ್ಯ ಗಾತ್ರಮಹಿಸಿರುವ

ವಿಷಕನ್ಯ

ಮೂಕ ಬಲಿ ನಿಲ್ಲಲಿ

ಭಾರತ ರಕ್ಷಣಾ ಶಾಸನಿನ ರೀತ್ಯಾ ಮೈಸೂರು ಸರ್ಕಾರವು ಸಂಸ್ಥಾನದಲ್ಲೆಲ್ಲೂ 15 ವರ್ಷ ವಿಸಾರದ ಹಸು ಮತ್ತು ಎಮ್ಮೆಗಳನ್ನೂ, ಹತ್ತು ವರ್ಷಕ್ಕೆ ವಿಸಾರದ ಎತ್ತು, ಕೋಣ ಮತ್ತು ಗೂಳಿಗಳನ್ನೂ ವಧಿಸ ಕೂಡದೆಂದು ಆಜ್ಞೆಯನ್ನು ಜಾರಿ ಮಾಡಿದೆ. ಆದರೆ ಕಲವೆಡೆ ಆಜ್ಞೋಲ್ಲಂಘನೆಗಳೂ ನಡೆದಿದೆ. ಇದೇ ಮಾಹೆ 14, 15, 16 ನೇ ತಾರೀಖುಗಳಲ್ಲಿ ಮೈಸೂರಿನ ಜಲಪುರಿ, ಮೊದಿಗರ ಕೇರಿ ಮತ್ತು ಕಲಾಪಕೇರಿಗಳಲ್ಲಿ ಕಳ್ಳತನದಿಂದಲೂ ಮೂರೀ ಹಬ್ಬದ ನೆಪದಿಂದಲೂ ಅನೇಕ ಚಿಕ್ಕಪುಟ್ಟ ಅಂದರೆ 4-6-8 ವರ್ಷಗಳ ಕರುಗಳನ್ನು ಆಹುತಿಕೊಡಲು ಗೋಪ್ಯವಾಗಿಟ್ಟು ಕೊಂಡಿರುವುದಾಗಿ ತಿಳಿಯಬಂದಿದೆ. ಭಾರತ ರಕ್ಷಣಾ ಶಾಸನದ ಪ್ರಕಾರ ಈ ಕೃತ್ಯವು ಮಹಾಪರಾಧವಾದುದ ಈ ಮೂಕ ಬಲಿಯನ್ನು ಸಾಪೂರ್ಣವಾಗಿ ನಿಲ್ಲಿಸಬೇಕೆಂಪು ಪ್ರಾರ್ಥನೆ.

ಸತ್ಯವಾದಿ

ದಿನ ಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ

ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ವಿಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ. ಅಂಚೆ ವೆಚ್ಚ ಸೇರಿ ಸರಸ್ಥಳಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ,
ಚಾಮರಾಜಪುರಂ, ಮೈಸೂರು

At Opera — 4 ನೇ ವಾರ

ತ್ಯಾಗರಾಜ ಭಾಗವತರ್ — ನಾಗಯ್ಯ — ಕನ್ನಾಂಬಾ

ಪಾತ್ರಪಹಿಸಿರುವ

ಅಶೋಕ ಕುಮಾರ (ತಮಿಳು)

ಹಸರ್ ಬೆಟ್ಟದಪುರದ

ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸನ್ಸ್

ಶಿವರಾಂಪೇಟೆ ಮೈಸೂರು.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

For Good Printing

L. N. Press

Sriramp et MYSORE

ರೇಷನಿಂಗ್ ಆಫೀಸ್

ಮೈಸೂರು ಸಿಟಿ

ತಾ || 11 ನೇ ಜನವರಿ 1946

No R 4. 366 / 45-46.

ಪ್ರಸಿದ್ಧ ಪತ್ರಿಕೆ

ರಾಗಿ ಅಭಾವದಿಂದ ಮೈಸೂರು ಸಿಟಿಗೆ ಸಾಕಾದಷ್ಟು ರಾಗಿ ಸರಬರಾಜು ಆಗದೆ ಇರುವುದರಿಂದ 'ಬಿ' ತರಗತಿ ರೇಶನ್ ಕಾರ್ಡಿನವರಿಗೆ ರಾಗಿ ಬದಲು 2 ನೇ ಮತ್ತು 3 ನೇ ತರಹೆ ಅಕ್ಕಿಯನ್ನು ಸಿಟಿ ರೇಶನ್ ಡಿಪೋಗಳಲ್ಲಿ ತಾತ್ಕಾಲಿಕವಾಗಿ ಕೊಡಲಾಗುತ್ತೆ.

2 ನೇ ತರಹೆ ಅಕ್ಕಿ ರೂಪಾಯಿಗೆ ಮೂರೂವರೆ ಸೇರು

3 ನೇ ತರಹೆ ಅಕ್ಕಿ ರೂಪಾಯಿಗೆ ನಾಲ್ಕು ಸೇರು

(ಸಹಿ) ಎಸ್. ಎಸ್. ಸುಬ್ರಹ್ಮಣ್ಯಂ

ರೇಷನಿಂಗ್ ಆಫೀಸರ್

11-1-46 ಮೈಸೂರು ಸಿಟಿ

ರಕ್ತವರ್ಧಿಗೆ = ಧಾತುಪುಷ್ಟಿಗೆ ಸಂಜೀವನ

ಶಕ್ತಿ ಸುಧಾ

ಲೀ ಡಬ್ಬಿಗೆ ೯ ಕ್ಕೆ ಒಂದು ರೂಪಾಯಿ.

ನಿಳಾಸ — ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು